# ಹಣ ಮತ್ತು ಸಾಲ




ಹಣ ಎಂಬುದು ವಿನಿಮಯದ ಸಾಧನ.ಇದು ಕಾಲದಿಂದ ಕಾಲಕ್ಕೆ ಬದಲಾವಣೆ ಪಡೆಯುತ್ತಾ ಬಂದಿದೆ. ಪುರಾತನ ಕಾಲದಲ್ಲಿ ಮಾನವರು ಕೊಡು ಕೊಳ್ಳುವಿಕೆಗಾಗಿ ವಸ್ತು ವಿನಿಮಯ ಪದ್ಧತಿಯನ್ನು ಅನುಸರಿಸುತ್ತಿದ್ದರು.ಕಾಲಾಂತರದಲ್ಲಿ ವಸ್ತುವಿನ ಮೌಲ್ಯಗಳನ್ನು ಸರಿದೂಗಿಸುವಲ್ಲಿ ಉಂಟಾದ ಸಮಸ್ಯೆಯ ಕಾರಣದಿಂದ ಬೇರೊಂದು ಸಾಧನದ ಅವಶ್ಯಕತೆ ಉಂಟಾಯಿತು. ಆದರಂತೆ ಪುರಾತನ ನಾಗರೀಕರು ಹಣದಂತಹ ವಿನಿಮಯದ ಮಾಧ್ಯಮವನ್ನು ಆವಿಷ್ಕರಿಸಿದರು.ಚೀನಿಯರು ಪ್ರಥಮವಾಗಿ ನಾಣ್ಯಗಳ ಬಳಕೆಯನ್ನು ಜಾರಿಗೆ ತಂದರು. ಭಾರತದಲ್ಲಿ ಪುರಾತನ ಸಿಂಧು ನಾಗರೀಕತೆಯ ಕಾಲದಲ್ಲಿ ನಾಣ್ಯಗಳು ಬಳಕೆಯಲ್ಲಿದ್ದವೆಂದು ಆಧಾರಗಳಿಂದ ತಿಳಿದುಬರುತ್ತದೆ.ಹಾಗೆ ಕುಷಾನ ದೊರೆ ವಿಮಾ ಕಡಪಿಸಸನು ಚಿನ್ನದ ನಾಣ್ಯಗಳನ್ನು ಬಳಕಗೆ ತಂದನು. ಗುಪ್ತರ ಕಾಲದಲ್ಲಿಯೂ ನಾಣ್ಯಗಳ ಬಳಕೆ ಇದ್ದುದು ಸಮುದ್ರಗುಪ್ತನ ಸಂಗೀತಪ್ರೇಮದ ವಿಷಯ ತಿಳಿಸುವ ನಾಣ್ಯಗಳಿಂದ ತಿಳಿದುಬರುತ್ತದೆ. ಮಧ್ಯಕಾಲದಲ್ಲಿ ಇಲ್ತಮಸನು ಬೆಳ್ಳಿ ನಾಣ್ಯಗಳನ್ನು ಬಳಕೆಗೆ ತಂದನು.ಮಹ್ಮದ ಬಿನ ತುಘಲಕನು ತನ್ನ ಸಾಮ್ರಾಜ್ಯದಲ್ಲಿ ಮೌಲ್ಯಯುತ ಚಿನ್ನ ಬೆಳ್ಳಿ ನಾಣ್ಯಗಳ ದುರುಪಯೋಗದ ಕಾರಣದಿಂದ ಚರ್ಮದ ನಾಣ್ಯಗಳನ್ನು ಬಳಕೆಗೆ ತಂದನು.ಮುಂದೆ ಸಹಕಾರ ಸಂಘಗಳು , ಸಾಲ ನೀಡುವ ಸಂಸ್ಥೆಗಳು ಹುಟ್ಟಿಕೊಂಡು 1935 ರಲ್ಲಿ ರಿಜರ್ವ ಬ್ಯಾಂಕಿನ ಸ್ಥಾಪನೆಯಾಗಿ ಸುಲಭವಾಗಿ ಸಾಗಿಸಬಹುದಾದ ಕಾಗದದ ಹಣ ಬಳಕೆಗೆ ಬಂದಿತು.

ಹಣವು ಮಾನವನ ಒ೦ದು ಅದ್ಭುತ ಸ೦ಶೋಧನೆಯಾಗಿದೆ.ಅದು ದಿನ ನಿತ್ಯದ ವ್ಯವಹಾರಗಳಲ್ಲಿ ವಿನಿಮಯ ಮಾಧ್ಯಮವಾಗಿ ಬಳಿಕೆಯಾಗುತ್ತದೆ.ಸರಕು-ಸೇವೆಗಳ ಮೌಲ್ಯ ನಿರ್ಣಯ,ಸ೦ಪತ್ತಿನ ಸ೦ಗ್ರಹ ಹಾಗೂಭವಿಷ್ಯದ ವ್ಯಾಪರವನ್ನು ಸರಳಗೊಳಿಸಿದೆ.ಹಣದಿ೦ದ ಮಾನವನ ವಾಣಿಜ್ಯ ವ್ಯವಹಾರಗಳು ಬೆಳವಣಿಗೆ ಹೊ೦ದಿವೆ.

ರಾಬರ್ಟ್ಸನ್ ಪ್ರಕಾರ ಸರಕುಗಳಿಗಾಗಿ ಸ೦ದಾಯ ಮಾಡುವಲ್ಲಿ ಆಥವಾ ಇತರೆ ವ್ಯಹಾರಿ ಸಾಲಗಳನ್ನು ತೀರಿಸುಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ.

ಹಣ ಎ೦ಬ ಪದವು ಇ೦ಗ್ಲೀಷಿನ M0ney ಎ೦ಬ ಪದವು ರೋಮನ್ ಭಾಷೆಯ ಮೊನೆಟ ಜುನೊ ಎ೦ಬ ಪದದಿ೦ದ ಬ೦ದಿದೆ.

ಭಾರತೀಯ ರೂಪಾಯಿಯು ಸ೦ಸ್ಕೃತದ ರುಪ್ಯಾಪದದಿ೦ದ ಬ೦ದಿದೆ.ಬೆಳ್ಳಿನಾಣ್ಯ ಎ೦ಬುವುದು ಇದರ ಅರ್ಥ.

ಹಣದ ವಿಕಾಸ : ಇ೦ದು ನಾವು ಕಾಗದದ ನೋಟುಗಳನ್ನು ಮತ್ತು ನಾಣ್ಯಗಳನ್ನು ಹಣವಾಗಿ ಬಳಸುತ್ತಿದ್ದೆವೆ. ಆದರೆ ಈ ಮಟ್ಟದ ವಿಕಾಸವು ಒ೦ದೇ ರಾತ್ರಿಯಲ್ಲಿ ಸ೦ಭವಿಸದ್ದಲ್ಲ.ಇದು ಈ ಹ೦ತವನ್ನು ತಲುಪಲು ಸಾವಿರಾರು ವರ್ಷಗಳನ್ನು ತೆಗೆದುಕ೦ಡಿದೆ.ಹಣದ ವಿಕಾಸದಲ್ಲಿ ಹಲವಾರು ಹ೦ತಗಳಿವೆ.ವಸ್ತು ವಿನಿಮಯ ಪದ್ಧತಿ ಯು ಪ್ರಾರ೦ಭದ ಹ೦ತವಾಗಿದೆ.

<u>ವಸ್ತು ವಿನಿಮಯ ಪದ್ಧತಿ</u> :ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.ವಸ್ತು ವಿನಿಮಯ ವು ಅತಿ ಕಷ್ಟದ ವ್ಯಾಪಾರವಾಗಿತ್ತು.ಇದರಲ್ಲಿ ಸಮಯ ಮತ್ತು ಕಾಲ ವ್ಯಯವಾಗುತ್ತಿತ್ತು.

ಬಹಳ ಹಿಂದೆಯೇ ಹಣ ಎಂಬ ಯಾವುದೇ ವಿಷಯ ಇರಲಿಲ್ಲ. ನಂತರ ವಿಷಯಗಳನ್ನು ವಿನಿಮಯ ಬಳಸಲಾಗುತ್ತದೆ ಜನರು ವಿನಿಮಯ ಸರಕು ಮತ್ತು services.For ಉದಾಹರಣೆಗೆ ಅಂದರೆ: ಶ್ಯಾಮ್ ಸೇಬುಗಳು ಮತ್ತು ಅಗತ್ಯವಿದೆ ಕಿತ್ತಳೆ ಹೊಂದಿದ್ದರೂ ರಾಮ್ ಕಿತ್ತಳೆ ಮತ್ತು ಅಗತ್ಯವಿದೆ ಆಪಲ್ಸ್ ಹೊಂದಿತ್ತು. ನಂತರ ಅವರು ಕಿತ್ತಳೆ ಮತ್ತು ಸೇಬು ವಿನಿಮಯ ಸಾಧ್ಯವಾಗಲಿಲ್ಲ. ಹಣ ಒಳಗೊಂಡ ಇಲ್ಲದೆ ಸರಕು ಮತ್ತು ಸೇವೆಗಳ ಎಕ್ಸ್ಚೇಂಜ್ ವಿನಿಮಯ ಕರೆಯಲಾಗುತ್ತದೆ







9000 BC
1200 BC
1000 BC
700 BC
800 AD
TODAY
Cattle & Crops
Cowrie Shells
Base Metal Coins
Precious Metal Coins
Paper Currency
ATM's Credit Cards Digital Cash


**ವಸ್ತು ರೂಪದ ಹಣ :**










INDIA


Α ΙΓ


Α ΙΓ



## ಕಾಗದದ ಹಣ



## ಬ್ಯಾಂಕ್ ಹಣ




## ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್

